ನಿ-330 (27)

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ. ಕಾಂತರಾಜ್ ಇವರ ನಿಯಮ 330ರ ಸೂಚನಾ ಪತ್ರಕ್ಕೆ ಉತ್ತರ ಒದಗಿಸುವ ಬಗ್ಗೆ.**

**ವಿಷಯ:-** "ಮಂಡ್ಯ ಪಶ್ಚಿಮ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಮೊಕದ್ದಮೆ ಸಂಖ್ಯೆ: 64/2019 ರಲ್ಲಿ ಪ್ರಕರಣವು ದಾಖಲಾಗಿ ಆರೋಪ ಸಾಬೀತಾಗಿ ಒಂದೂವರೆ ವರ್ಷಗಳು ಕಳೆದರೂ ಅಂತಿಮ ತನಿಖಾ ವರದಿ ಸಲ್ಲಿಸಿರುವುದಿಲ್ಲ. ಸದರಿ ಪ್ರಕರಣವು ಐ.ಪಿ.ಸಿ ರಡಿಯಲ್ಲಿ ಗಂಭೀರ ಪ್ರಕರಣವಾಗಿರುವುದರಿಂದ ಇಲಾಖೆಯ ಅಭಿಯೋಜನಾ ಮಂಜೂರಾತಿ ಅವಶ್ಯಕತೆ ಇರುವುದಿಲ್ಲ. ಆದರೂ ಸಹ ಅಭಿಯೋಜನಾ ಮಂಜೂರಾತಿಗಾಗಿ ಸಂಬಂಧಪಟ್ಟ ಇಲಾಖೆಗೆ ಮನವಿ ಸಲ್ಲಿಸಿ ಇದುವರೆವಿಗೂ ಮಂಜೂರಾತಿ ನೀಡಿಲ್ಲವೆಂಬ ನೆಪದಿಂದ ಅಂತಿಮ ತನಿಖಾ ವರದಿ ಸಲ್ಲಸದೆ ಪ್ರಕರಣವು ವಿಳಂಬವಾಗುತ್ತಿದ್ದು, ಕೂಡಲೇ ಅಂತಿಮ ತನಿಖಾ ವರದಿ ಸಲ್ಲಿಸಿ ನ್ಯಾಯ ಒದಗಿಸುವ ಬಗ್ಗೆ ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ".

**ಉತ್ತರ :-** ಶ್ರೀಮತಿ. ಲತಾ. ಅಸಿಸ್ಟೆಂಟ್ ಕಮೀಷನರ್, ಮಂಡ್ಯ ರವರು ~~ದಿನಾಂಕ~~ ದಿನಾಂಕ 27/04/2019 ರಂದು ಮಂಡ್ಯ ಪಶ್ಚಿಮ ಪೋಲೀಸ್ ಠಾಣೆಗೆ ಹಾಜರಾಗಿ, ಶ್ರೀಮತಿ. ಸುಷ್ಮಾ, ಅಬಕಾರಿ ನಿರೀಕ್ಷಕರು, ಮಳವಳ್ಳಿ ರವರ ವಿರುದ್ಧ ವಂಚನೆ, ಕಳವು ಮತ್ತು ಪ್ರಾಣ ಬೆದರಿಕೆ ಹಾಕಿರುವ ಕುರಿತು ನೀಡಿದ ದೂರಿನ ಮೇರೆಗೆ ಪಶ್ಚಿಮ ಠಾಣೆ ಮೊ.ಸಂ. 64/2019 ಕಲಂ: 379, 420, 506 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.

ಪ್ರಕರಣಕ್ಕೆ ಸಂಬಂದಿಸಿದಂತೆ ಪ್ರಗತಿ ಪರ ಪರಿಶೀಲನೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಾದ ಶ್ರೀ. ಟಿ.ಎಂ. ಶ್ರೀನಿವಾಸ ಮೂರ್ತಿ, ಶ್ರೀಮತಿ. ಎಂ.ಆರ್.ಮಮತ, ಶ್ರೀಮತಿ.ಪಿ.ಪ್ರೇಮ, ಶ್ರೀಮತಿ.ಎಸ್.ಎಂ.ಶೈಲಜಾ, ಶ್ರೀ.ಎನ್.ರಾಜೇಶ್ & ಶ್ರೀ. ಎಸ್.ಎನ್. ಪ್ರೇಮ ಕುಮಾರ್, ಶ್ರೀ. ವೈಭರತೇಶ್, & ಶ್ರೀ. ಡಿ.ವಿ. ದಿನಕರ್ ರವರುಗಳನ್ನು ವಿಚಾರಣೆ ಮಾಡಲಾಗಿರುತ್ತದೆ.

ಈ ಪ್ರಕರಣದ ತನಿಖೆಯಿಂದ & ಸಾಕ್ಷ್ಯಾಧಾರಗಳಿಂದ ಆರೋಪಿ ಕೆ.ಸುಷ್ಮಾರವರ ವಿರುದ್ಧ ಐಪಿಸಿ ಕಲಂ: 380, 506 ರನ್ವಯ ಅರೋಪ ಸಾಬೀತಾಗಿರುವುದರಿಂದ ದಿನಾಂಕ 20/12/2019 ರಂದು ಆರೋಪಣಾ ಪತ್ರವನ್ನು ತಯಾರಿಸಿ ದಿನಾಂಕ 20/01/2020 ರಂದು ಸಹಾಯಕ ಸರ್ಕಾರಿ ಅಭಿಯೋಜಕರು, ಮಂಡ್ಯರವರಿಗೆ ಸಲ್ಲಿಸಿಕೊಂಡಿದ್ದು, ಸಹಾಯಕ ಸರ್ಕಾರಿ ಅಭಿಯೋಜಕರು ಪರಿಶೀಲನೆ ಮಾಡಿ, ಕೆಲವು ಸೂಚನೆಗಳೊಂದಿಗೆ ಮೇಲಾಧಿಕಾರಿಗಳ ಮುಖಾಂತರವಾಗಿ ಸಲ್ಲಿಸುವಂತೆ ದೋಷರೋಪಣೆ ನ್ಯಾಯಾಲಯಕ್ಕೆ ಸಲ್ಲಿಸುವಂತೆ ಸೂಚಿಸಿರುತ್ತಾರೆ.

ದಿನಾಂಕ 23/05/2020 ರಂದು ಅಬಕಾರಿ ಆಯುಕ್ತರು ಶಾಂತಿನಗರ, ಬೆಂಗಳೂರು ರವರಿಗೆ ಆರೋಪಿ-01, ಕೆ.ಸುಷ್ಮಾ, ಹಾಲಿ ಅಬಕಾರಿ ನಿರೀಕ್ಷಕರು, ಜಯನಗರ, ವಲಯ ಬೆಂಗಳೂರು ಸಿಟಿ. [ಈ ಹಿಂದೆ ಮಳವಳ್ಳಿ ಉಪ-ವಿಭಾಗ, ಮಂಡ್ಯ ಜಿಲ್ಲೆ.] ರವರನ್ನು ಅಭಿಯೋಜನೆಗೆ ಒಳಪಡಿಸಲು ಅನುಮತಿ ನೀಡುವಂತೆ ಕೋರಿ ಪತ್ರ ವ್ಯವಹಾರ ಮಾಡಲಾಗಿರುತ್ತದೆ. ಈ ಬಗ್ಗೆ ಯಾವುದೇ ವರದಿ ಬಾರದ ಕಾರಣ ದಿನಾಂಕ 17/07/2020 ರಂದು ಸದರಿಯವರಿಗೆ ಮರು ಮನವಿಯನ್ನು ರಿಜಿಸ್ಟರ್ ಅಂಚೆ ಮುಖಾಂತರವಾಗಿ ರವಾನಿಸಲಾಗಿರುತ್ತದೆ.

ಸದರಿ ಪ್ರಕರಣದಲ್ಲಿ ತನಿಖೆಯು ಪೂರ್ಣಗೊಂಡಿದ್ದು, ಅಬಕಾರಿ ಆಯುಕ್ತರು ಶಾಂತಿನಗರ, ಬೆಂಗಳೂರು ರವರಿಂದ ಅಭಿಯೋಜನಾ ಮಂಜೂರಾತಿ ಕುರಿತು ಅನುಮತಿ ವರದಿ ಬರುವುದು ಬಾಕಿ ಇರುವುದರಿಂದ ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿರುವುದಿಲ್ಲ.

ಸದರಿ ಪ್ರಕರಣದ ತನಿಖೆಯಲ್ಲಿ ಯಾವುದೇ ವಿಳಂಬ ದೋರಣೆಯನ್ನು ತೋರದೆ ತನಿಖೆಯನ್ನು ಸಮರ್ಪಕವಾಗಿ ನಡೆಸಿ, ಸಾಕ್ಷಿಗಳನ್ನು ಸಂಗ್ರಹಿಸಿ, ದೋಷಾರೋಪಣೆ ಪಟ್ಟಿಯನ್ನು ಸಿದ್ಧಪಡಿಸಿದ್ದು, ಅಭಿಯೋಜನೆ ಮಂಜೂರಾತಿ ಬಂದ ಕೂಡಲೇ ಮಾನ್ಯ ನ್ಯಾಯಾಲಯಕ್ಕೆ ದೋಷರೋಪಣೆ ಪಟ್ಟಿಯನ್ನು ಸಲ್ಲಿಸಿ ಪ್ರಕರಣವನ್ನು ಮುಕ್ತಾಯ ಗೊಳಿಸಲಾಗುವುದು.

**ಒಇ19ಪಿಸಿಕ್ಯೂ2020**

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು